ವಿ.ಹೇಮಂತಕುಮಾರ್, ಬೆಂಗಳೂರು

ಕೋಗಿಲೆಯೊಂದು ಮಾವು ಬಿಟ್ಟು ಬೇವಿನ ಮರದಲ್ಲಿ ಕುಳಿತು ಹಾಡುತ್ತಿದೆಯಲ್ಲಾ?



ಮಾಮರ ಎಲ್ಲೋ... ಕೋಗಿಲೆ ಎಲ್ಲೋ.... ಎಂದು ಹಾಡೇ ಇದೆಯಲ್ಲ.

ಬಸವರಾಜ ಹೆಚ್ ಬಿಸರಳ್ಳಿ, ಕಾಮನೂರ

ಮನುಷ್ಯ ಸತ್ತರೆ ಮಣ್ಣಿಗೆ, ಮಣ್ಣೇ ಸತ್ತರೆ ಎಲ್ಲಿಗೆ?

ಅದನ್ನೇ ನಂಬಿದ್ದವರ ಬಾಯಿಗೆ!

ಕಂಡಕ್ಟರ್ ರಾಜು, ಗುಬ್ಬಿ

ಪ್ರೀತಿನ ಪ್ರೀತಿಯಿಂದ ಪ್ರೀತ್ಸೋದು ಹೇಗೆ?

ಪ್ರೇಮಾನ ಪ್ರೇಮದಿಂದ ಪ್ರೇಮಿಸೋ ಹಾಗೆ!

ವಿನುತಾ ಡಿ, ಪುತ್ತೂರು

ಅವ್ಯವಸ್ಥಿತ ರಾಜಕೀಯ ಸ್ಥಿತಿ ಬದಲಾಗುವುದು ಯಾವಾಗ?

ರಾಜಕೀಯಕ್ಕೆ ಅವ್ಯವಸ್ಥೆಯೇ ಗುಣ, ಚಿಹ್ನೆ, ಲಕ್ಷಣ ವಿನುತಾ.

ನಾಗರಾಜ ರಾಮಚಂದ್ರ ಹೆಗಡೆ, ಕಡ್ಲೆ

ಚಿಂತೆಯ ನಂತರ ಚಿತೆಯೋ?




ನಿಜವೇ. ಬಾಳಿನ ಕಗ್ಗಂಟಿನಲ್ಲೂ, ಕನ್ನಡದ ನಿಘಂಟಿನಲ್ಲೂ ಅದೇ ಕ್ರಮ!

ಎಂ.ಜಿ.ನೇಹವರ್ಷಿಣಿ, ಬಳ್ಳಾರಿ

ಇನ್ನೊಬ್ಬರಿಗೆ ದೇವರು ಪ್ರತ್ಯಕ್ಷವಾದಾಗ ನಾವು ವರ ಕೇಳಿದರೆ?

ಕು–ವರ ಸಿಗಬಹುದು!

ಸೃಜನಾ ಜೈನ್, ಹೂವಿನಹಡಗಲಿ

ಮೃದು ಮಧುರ ಉತ್ತರದ ಹಿಂದೆ ಕೈಬಳೆ ನಾದ ಕೇಳಿಸುತ್ತಿದೆ!?

ನಿಜ. ಸೂಕ್ತ ಉತ್ತರ ನೀಡಲು ನಾನು ಕಂಕಣಬದ್ಧ!

ಮೈಥಿಲಿಕೃಷ್ಣ, ಬೆಂಗಳೂರು

ಬೇಡ, ಬೇಡವೆಂದರೂ ನಮಗೆ ಬರುವುದು; ಬೇಕು, ಬೇಕು ಎಂದರೂ ಬಾರದಿರುವುದು ಯಾವುವು?

ರೋಗ, ಹಣ!

ದೇಶವಳ್ಳಿ ಶಿವು, ಸಂತೇಮರಹಳ್ಳಿ

ಮನಸ್ಸಿನ ಕೊಳೆ ತೊಳೆಯುವ ಸಾಬೂನು ಬಂದ್ರೆ...?

ಈಗಲೇ ಇದೆಯಲ್ಲಾ... ಆತ್ಮಸಾಕ್ಷಿ ಅಂತಹ ಸಾಬೂನೇ. ಆದರೆ ನಾವೇ ಅದರ ಪ್ಯಾಕೆಟ್ ಬಿಚ್ಚುವುದಿಲ್ಲ ಅಷ್ಟೆ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು

ನನಗೆ ತುಂಬಾ ಬೇಜಾರಾದ್ರೆ ಗುಂಡು ಹಾಕ್ತೀನಿ; ನೀವೇನ್ಮಾಡ್ತೀರಾ?

ನಿಮ್ ಎಂಡ, ನಿಮ್ ಬುಡ್ಡಿ, ಕುಡ್ಕೊಳಿ ಅಂತೀನಿ.

ಪಂಕಜ, ಬೆಂಗಳೂರು

ಅಷ್ಟಮ ಶನಿ ಬಿಟ್ಟಿತು; ಪ್ರಶ್ನೆಗೆ ಉತ್ತರಿಸುವಿರಾ?

ಗ್ರಹಚಾರ ಬದಲಾಗುವ ಮುನ್ನ ಪ್ರಶ್ನೆ ಕಳಿಸಿ, ಉತ್ತರಿಸಿಯೇಬಿಡುತ್ತೇನೆ!

ಮಾಲತಿರಾಜು, ಬೆಂಗಳೂರು

ದೇವರು ಇದ್ದಾನೆ ಎನ್ನುವುದಾದರೆ ದೆವ್ವವೂ ಇರಲೇಬೇಕಲ್ಲವೇ?

ಹಾಗೇನಿಲ್ಲ. ಸಿಹಿಯ ಅರಿವಾಗಲು ಖಾರ ತಿನ್ನಲೇಬೇಕೆಂದೇನಿಲ್ಲ!

ಪಿ.ವಿ. ಆಚಾರ್ಯ, ಬೆಂಗಳೂರು

ರಾಮ್‌ಜೀಯವರ ಬತ್ತಳಿಕೆಯಲ್ಲಿ ಉತ್ತರಗಳೆಂಬ ಬಾಣಗಳೆಲ್ಲಾ ಬತ್ತಿಹೋದ ದಿನವೇ ಜಲಪ್ರಳಯವಾಗುತ್ತದೆಂದು ಜ್ಯೋತಿಷಿಯೊಬ್ಬರು ಹೇಳಿದ್ದಾರೆ. ನಿಜವೇ?

ಜ್ಯೋತಿಷ ಮತ್ತು ನಿಜ ವಿರುದ್ಧ ಪದಗಳು ಆಚಾರ್ಯರೇ. ನಿಮ್ಮ ಪ್ರಶ್ನೆಗಳ ಬಿಲ್ಲಿನ ಆಧಾರವಿರುವತನಕ ಈ ರಾಮಬಾಣಗಳು ನಿರಂತರವೆಂಬುದಷ್ಟೇ ಸತ್ಯ.

ಸೊಂ.ನಾ. ಶ್ರೀಧರಮೂರ್ತಿ, ದಾವಣಗೆರೆ

ವಯೋವೃದ್ಧರಿಗೆ ಮಾನಸಿಕ ಆರೋಗ್ಯ ಮುಖ್ಯವೋ, ದೈಹಿಕ ಆರೋಗ್ಯವೋ?

ದೈಹಿಕ ಆರೋಗ್ಯ ಕಾಪಾಡಿಕೊಳ್ಳುವಷ್ಟು ಮಾನಸಿಕ ಆರೋಗ್ಯ ಸರಿಯಿದ್ದರೆ ಸಾಕು.

## ಬಹುಮಾನಿತ ಪ್ರಶ್ನೆ

ಎಚ್.ಆರ್.ದೇಸಾಯಿ, ರಾಯಚೂರು

ನಾವು ನಮ್ಮ ಪೂರ್ವಜರಿಂದ ಏನು ಪಡೆದಿದ್ದೇವೆ? ಮುಂದಿನ ಪೀಳಿಗೆಗೆ ಏನು ಕೊಟ್ಟು ಹೋಗುತ್ತಿದ್ದೇವೆ?

ಪಡೆದದ್ದು ಪರಿಸರ, ಕೊಡುವುದು ಪರಿಸರಮಾಲಿನ್ಯ.

ರೆಮಿತಾ ಸಿಕ್ವೇರಾ, ಹೊಸನಗರ

ಹೆಣ್ಣು ಗಂಡಿನಿಂದ ಬಯಸುವ ಮೊದಲ ವಸ್ತು ಯಾವುದು?

ನಿಷ್ಕಲ್ಮಷ ಪ್ರೀತಿ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

ಬದುಕು ಮತ್ತು ಮುಕ್ತಿ — ಅದರರ್ಥ?

ಬದುಕು ಎಂದೂ ಮುಗಿಯದ ಸೀರಿಯಲ್. ಅಂತಹ ದೀರ್ಘಕಾಲಿಕ ಸೀರಿಯಲ್‌ಗಳಿಂದ ಬಿಡುಗಡೆ ಹೊಂದುವುದೇ ಮುಕ್ತಿ.

ಮುರಲೀಧರ ಕುಲಕರ್ಣಿ, ಬೀದರ್

ಕೊಳವೆಬಾವಿ ದುರಂತಗಳು ಹೆಚ್ಚುತ್ತಿದ್ದರೂ ಸರ್ಕಾರ ಏಕೆ ಕಣ್ಣುಮುಚ್ಚಿಕೊಂಡು ಕುಳಿತಿದೆ?

ಕೊಳವೆಬಾವಿ ಸಂತ್ರಸ್ತರಿಗೆ ಎಂದು ಹಣ ಸಂಗ್ರಹಿಸಿ ಕೊಳ್ಳೆ ಹೊಡೆಯಲಾಗದಲ್ಲ!

ಜಾಕೋಬ್ ಡಿಸೋಜಾ, ಕುರುವಳ್ಳಿ

ಬಯಸದೆ ಬಂದ ಭಾಗ್ಯ ಯಾವುದು?

ಆ ಹೆಸರಿನ ಗಯ್ಯಾಳಿ ಹೆಂಡತಿ ಎಂದನೊಬ್ಬ ನೊಂದ ಪತಿ.

ಎನ್.ವಿ. ಶ್ರೀನಿವಾಸ್, ಮೈಸೂರು

ಅಕ್ಕಪಕ್ಕದ ದೇಶಗಳು ಭಾರತವನ್ನೂ, ಅಕ್ಕಪಕ್ಕದ ರಾಜ್ಯಗಳು ಕರ್ನಾಟಕವನ್ನೂ ಅಷ್ಟೊಂದು ದ್ವೇಷಿಸುವುದೇಕೆ?

ತಾಕತ್ತು, ಹಾಗೂ ಸಂಪತ್ತು, ಮಾತ್ಸರ್ಯವನ್ನು ಆಕರ್ಷಿಸುವುದರಿಂದ.

ಕುಮಾರ್ ಚಲವಾದಿ, ಹೊಳೆನರಸಿಪುರ

ನಗುವಾಗ ಎಲ್ಲ ನೆಂಟರು. ಕೋಪ ಬಂದಾಗ?



ಬೇಗ ತಲುಪಿರಿ ಬಿಪಿ ಚೆಕಿಂಗ್ ಸೆಂಟರು!

■ ರಾಮ್